**ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ ಅರಕಲಗೂಡು**

**ಸಿ.ಸಿ.ನಂ:1023/2018**

**ದಿ:11/12/2019**

ಪಿರ್ಯಾದಿ :- ಅರಕಲಗೂಡು ಪೊಲೀಸ್

:: ವಿರುದ್ಧ ::

ಆರೋಪಿ :- ಆನಂದ ಬಿನ್ ಅಣ್ಣಯ್ಯ

ಆಪಾದನೆ

ಶ್ರೀ ಯೋಗೇಶ ಎಂ.ಎ ಎಲ್.ಎಲ್‌ಬಿ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅರಕಲಗೂಡು ಆದ ನಾನು, ಆರೋಪಿಯಾದ

1. ಆನಂದ ಬಿನ್ ಅಣ್ಣಯ್ಯ
   38 ವರ್ಷ,
   ಉಡುವಾರೆ ಗ್ರಾಮ,
   ಕಟ್ಟಾಯ ಹೋಬಳಿ ,
   ಹಾಸನ ತಾಲ್ಲೂಕು

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ

ದಿನಾಂಕಃ 19/10/2018 ರಂದು ಮಧ್ಯಾಹ್ನ 2-30 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣೆ ವ್ಯಾಪ್ತಿಯ ಅತ್ನಿ ಗ್ರಾಮದ ಕೆಂಚೇಗೌಡರ ಜಮೀನಿನ ಹತ್ತಿರ ಮಣ್ಣು ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿಯಾದ ನೀವು ಕೆಎ-13-ಇಎಂ-7105 ರ ಬೈಕನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೋಗುತ್ತಿದ್ದ ಟಿ.ಎನ್.38 ಎಕ್ಸ್ -2785 ರ ಬೈಕಿನ ಹಿಂಭಾಗಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಕೆಎ-13-ಇಎಂ-7105 ಬೈಕಿನಿಂದ ಸುಂದರರವರು ಚಲಾಯಿಸುತ್ತಿದ್ದ ಟಿ.ಎನ್.38 ಎಕ್ಸ್ -2785 ರ ಬೈಕಿನ ಹಿಂಭಾಗಕ್ಕೆ ಡಿಕ್ಕಿಪಡಿಸಿ ಡಿಕ್ಕಿಪಡಿಸಿದ ಪರಿಣಾಮ ಸುಂದರ ರವರು ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದು, ತಲೆಯ ಹಿಂಭಾಗ ಮತ್ತು ಎಡಹಣೆಯ ಹತ್ತಿರ ರಕ್ತಗಾಯಗಳಾಗಿ ಸದರಿ ಅಪಘಾತದಿಂದ ಆದ ಗಾಯದಿಂದ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ. ಆದ್ದರಿಂದ ಭಾ.ದಂ.ಸಂ. ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ -

ಪ್ರ-2. ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಆರೋ ಪಿಗೆ ಆಪಾದನೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು